**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ : 672/2020**
**ಚಾಸಾ :- 02 / ಪ್ರಾಸಾ :- 01**

| | |
|---|---|
| ಹೆಸರು | **ಕೃಷ್ಣಮೂರ್ತಿ** |
| ತಂದೆಯ ಹೆಸರು | **ಸಂಪಂಗಿನರಸಿಂಹಯ್ಯ** |
| ವಯಸ್ಸು | **55** |
| ಉದ್ಯೋಗ | **ಅರ್ಚಕರು** |
| ವಿಳಾಸ | **ಮಾರೇನಹಳ್ಳಿ** |

**ದಿನಾಂಕಃ 28-07-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಈಗ ನನಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯು ಪಂಚನಾಮೆಯಾಗಿದೆ. ಪಂಚನಾಮೆಯನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. 2019 ನೇ ಇಸವಿಯ 19 ನೇ ತಾರೀಖಿನಂದು ಕಾರು ಮತ್ತು ದ್ವಿಚಕ್ರವಾಹನದ ನಡುವೆ ಅಪಘಾತಕ್ಕೆ ಸಂಬಂಧಿಸಿದಂತೆ ನಾನು ನಿಪಿ-1 ಕ್ಕೆ ಬಳಗ್ಗೆ 7.30 ರಿಂದ 8 ಗಂಟೆಯ ಸಮಯದಲ್ಲಿ ಅಪಘಾತ ನಡೆದ ಸ್ಥಳದಲ್ಲಿ ಸಹಿಯನ್ನು ಮಾಡಿರುತ್ತೇನೆ. ನನ್ನ ಜೊತೆ ನಿಪಿ-1 ಕ್ಕೆ ಚಾಸಾ-3 ಮತ್ತು ಚಾಸಾ-3 ರವರ ತಂದೆಯಾದ ದೊಡ್ಡನಂಜಪ್ಪನವರು ಸಹಿಯನ್ನು ಮಾಡಿರುತ್ತಾರೆ. ನಿಪಿ-1 ರಂತೆ ಪಂಚನಾಮೆಯನ್ನು ಮಾಡಿದಾಗ ಪೋಲೀಸರು ಎರಡು ವಾಹನಗಳನ್ನು ಅಮಾನತ್ತು ಮಾಡಿಕೊಂಡಿರುತ್ತಾರೆ.

ಮಾಗಡಿ ಕಡೆಯಿಂದ ಬಿಳಿ ಬಣ್ಣದ ಡಿಸೈರ್ ಕಾರು ಹೋಗುತ್ತಿತ್ತು ಮತ್ತು ಎದುರುಗಡೆಯಿಂದ ದ್ವಿಚಕ್ರವಾಹನ ಬರುತ್ತಿತ್ತು. ನನಗೆ ವಾಹನಗಳ ಸಂಖ್ಯೆ ಗೊತ್ತಿಲ್ಲ. ವಾಹನಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ. ಈಗ ನನಗೆ

ಕೆಲವು ಫೋಟೋಗಳನ್ನು ತೋರಿಸಿದ್ದು, ಸದರಿ ಫೋಟೋದಲ್ಲಿ ಇರುವ ಡಿಸೈರ್ ಕಾರನ್ನು ಮತ್ತು ದ್ವಿಚಕ್ರವಾಹನವನ್ನು ಪೋಲೀಸರು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ-2 ರಿಂದ 7 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಪೋಲೀಸರು ಬಿಳಿ ಬಣ್ಣದ ಡಿಸೈರ್ ಕಾರಿನ ಸಂ.ಕೆಎ-42-ಎ-9163 ವಾಹನವನ್ನು ವಶಪಡಿಸಿಕೊಂಡರು ಎಂದರೆ ನನಗೆ ಅದರ ಬಗ್ಗೆ ನೆನಪಿಲ್ಲ. ಸಾಕ್ಷಿಯು ಮುಂದುವರೆದು ಪೋಲೀಸರು ಅದೇ ಕಾರನ್ನು ವಶಪಡಿಸಿಕೊಂಡಿದ್ದಾರೆ ಎಂದು ನುಡಿದಿರುತ್ತಾರೆ. ನಿಪಿ-1 ಕ್ಕೆ ನನ್ನ ಜೊತೆ ಚಾಸಾ-1 ರವರು ಸಹಿ ಮಾಡಿದ್ದಾರೆ ಎಂದರೆ ಸರಿ.

**ಪಾಟೀ ಸವಾಲು :- ಆರೋಪಿ ಪರ ಶ್ರೀ.ಸಿ.ಡಿ.ಪಿ , ವಕೀಲರಿಂದ :-**

ನಾನು ನಿಪಿ-2 ರಿಂದ 7 ರಲ್ಲಿ ತೋರಿಸಿರುವ ಜಾಗದಲ್ಲಿಯೇ ನಿಪಿ-1 ಕ್ಕೆ ಸಹಿಯನ್ನು ಮಾಡಿರುತ್ತೇನೆ. ನನಗೆ ನಿಪಿ-1 ರಲ್ಲಿ ಇರುವ ವಿಷಯದ ಬಗ್ಗೆ ಮಾಹಿತಿ ಇಲ್ಲ. ಸಾಕ್ಷಿಯು ಮುಂದುವರೆದು ನಿಪಿ-1 ರಲ್ಲಿ ಪಂಚನಾಮೆ ಮತ್ತು ವಾಹನಗಳ ಬಗ್ಗೆ ಬರೆದಿರುತ್ತಾರೆ ಎಂದು ನುಡಿದಿರುತ್ತಾರೆ. ನಿಪಿ-1 ರಂತೆ ಪಂಚನಾಮೆ ಮಾಡುವಾಗ ಸುಮಾರು 10 ಜನರು ಇದ್ದರು. ಅವರು ಹೆಸರುಗಳು ಗೊತ್ತು. ಅವರುಗಳು ಶ್ರೀಧರ್, ದೊಡ್ಡನಂಜಪ್ಪ, ಕೃಷ್ಣಮೂರ್ತಿ ಮತ್ತು ಇತರರ ಹೆಸರು ನನಗೆ ಗೊತ್ತಿಲ್ಲ. ನಿಪಿ-1 ಕ್ಕೆ ಸಹಿ ಮಾಡುವಂತೆ ಪೋಲೀಸರು ನನಗೆ ಯಾವುದೇ ನೋಟಿಸ್ ನ್ನು ನೀಡಿರುವುದಿಲ್ಲ.

ಚಾಸಾ-1 ಮತ್ತು 3 ರವರು ನನ್ನ ಊರಿನವರು ಎಂದರೆ ಚಾಸಾ-3 ರವರು ಮಾತ್ರ ನನ್ನ ಊರಿನವರು. ಚಾಸಾ-1 ರವರು ನನಗೆ ಪರಿಚಯವಿಲ್ಲ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**